## ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/495/2010-11 ದಿನಾಂಕ : 20/ 09/ 2016

ಉಪಸ್ಥಿತರು: **ಶ್ರೀಲೋಕೇಶ್ ಪಿ.ಎನ್.** (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಪೊಂಪಾಪತಿ<br>2.ಶ್ರೀನಿವಾಸ<br>3.ಶ್ರೀಗಣೇಶ ತಂದೆ ಲೇಟ್ ಭೀಮಣ್ಣ,<br>ಕೊತ್ತಲಚಿಂತ ಗ್ರಾಮ,ಸಿರುಗುಪ್ಪ ತಾಲ್ಲೂಕು<br><br>(ಶ್ರೀಯು.ಬಸವರಾಜ ಮತ್ತು ಎಸ್.ಯಲ್ಲನಗೌಡ,<br>ವಕೀಲರು, ಬಳ್ಳಾರಿ) ವಕೀಲರು | 1.ತಹಶೀಲ್ದಾರರು,ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ಹಚ್ಚೊಳ್ಳಿ<br>3.ಗ್ರಾಮಲೆಕ್ಕಾಧಿಕಾರಿಗಳು,ಕೊತ್ತಲಚಿಂತ<br>4.ಶ್ರೀ ಎ.ನರಸಪ್ಪ ತಂದೆ ಲೇಟ್ ಯಂಕಪ್ಪ<br>5.ಶ್ರೀಮತಿ ರಾಯಮ್ಮ ಗಂಡ ಲೇಟ್ ಗೋವಿಂದಪ್ಪ<br>6.ಶ್ರೀ ರಾಮಣ್ಣ ತಂದೆ ಲೇಟ್ ರಾಮಣ್ಣ<br>7.ಶ್ರೀತಿರುಪತಿ ತಂದೆ ಲೇಟ್ ರಾಮಣ್ಣ,ಕೊತ್ತಲಚಿಂತ<br>ಗ್ರಾಮ, ಸಿರುಗುಪ್ಪ ತಾಲೂಕು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಕೊತ್ತಲಚಿಂತ | 6/ಎ/2 | 2.58 |
| | | 8/ಎ | 1.52 |
| | | 37/ಎ | 0.51 |
| | | 80/ಎ | 2.33 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರ ಎಂ.ಆರ್.ನಂ.23/97-98 ರ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 14.06.2011, 18.10.2011, 16.12.2011, 08.05.2012, 29.05.2012, 03.07.2012, 14.02.2014, 25.11.2014 05.05.2015, 16.06.2015, 04.08.2015, 22.03.2016, 24.05.2016, 07.06.2016, 05.07.2016, 02.08.2016, 20.09.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ, ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ದಿವಾಣಿ ನ್ಯಾಯಾಲಯದ ಸಮ್ಮುಖದಲ್ಲಿ ಇತ್ಯರ್ಥ ಪಡಿಸಿಕೊಂಡಿರುವುದಾಗಿ ತಿಳಿಸಿ, ಮೇಲ್ಮನವಿಯನ್ನು ಹಿಂಪಡೆಯಲು ಕೋರಿ ದಿನಾಂಕ:20.09.2016 ರಂದು ನಾಟ್ ಪ್ರೆಸ್ ಮೆಮೋ ಸಲ್ಲಿಸಿರುತ್ತಾರೆ.

ಕಾರಣ ಸದರಿ ಪ್ರಕರಣವನ್ನು ಮುಂದುವರೆಸಲು ಆಸಕ್ತಿ ಇಲ್ಲವೆಂದು ತಿಳಿಸಿ ವಾದಿಪರ ವಕೀಲರು ಮೆಮೋ (NOT PRESS MEMO) ಸಲ್ಲಿಸಿರುವ ಮೇರೆಗೆ ಹಾಗೂ ಮುಕ್ತಾಯಗೊಳಿಸಲು ಕೋರಿ ಸಹಿ ಮಾಡಿ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ ಆದೇಶ.

:: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೊತ್ತಲಚಿಂತ ಗ್ರಾಮದ ಸ.ನಂ. 6/ಎ/2,8/ಎ, 37/ಎ, 80/ಎ ವಿಸ್ತೀರ್ಣ: 2.58,1.52,0.51,2.33ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೆಮೋ (NOT PRESS MEMO) ರ ಮೇರೆಗೆ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಿ ಪ್ರಕರಣವನ್ನು ವಜಾ ಮಾಡಿ ಆದೇಶಿಸಲಾಗಿದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯದಿಂದ ದಿನಾಂಕ:15.12.2010 ರಂದು ನೀಡಿರುವ ಯಥಾಸ್ಥಿತಿ ಆದೇಶವನ್ನು ತೆರವುಗೊಳಿಸಿ,ಆದೇಶಿಸಿದೆ.

ಈ ಆದೇಶವನ್ನು ಹೇಳಿ,ಬರೆಯಿಸಿ ತಪ್ಪುಗಳನ್ನು ತಿದ್ದು **ದಿನಾಂಕ:20.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಸಹಾಯಕ ಆಯುಕ್ತರು,
ಬಳ್ಳಾರಿ.

ಈ ಆದೇಶವನ್ನು ಹೇಳಿ,ಬರೆಯಿಸಿ ತಪ್ಪುಗಳನ್ನು ತಿದ್ದು **ದಿನಾಂಕ 24.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.